ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2252
ಸದಸ್ಯರ ಹೆಸರು	: ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	: 26-03-2021.
ಉತ್ತರಿಸುವವರು	: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮ ಪಂಚಾಯಿತಿಗಳ ಅಡಿಯಲ್ಲಿ ಬರುವಂತಹ ಗ್ರಾಮಗಳಲ್ಲಿ ದಾಖಲಾಗುವ ನಿವೇಶನಗಳು ಮತ್ತು ಮನೆಗಳ ದಾಖಲಾತಿಗಳನ್ನು ಇ-ಸ್ವತ್ತಿನಡಿಯಲ್ಲಿ ನೋಂದಾಯಿಸಲು ಸರ್ಕಾರ ಕಾಲಾವಕಾಶವನ್ನು ನಿಗಧಿಪಡಿಸಿದೆಯೇ;	ಸರ್ಕಾರದಿಂದ ಕಾಲಾವಕಾಶವನ್ನು ನಿಗದಿಪಡಿಸಿರುವುದಿಲ್ಲ.
(ಆ)	ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಯಲ್ಲಿ ಬರುವಂತಹ ಗ್ರಾಮಗಳಲ್ಲಿ ಮನೆಗಳು ಮತ್ತು ನಿವೇಶನಗಳ ದಾಖಲೆಗಳನ್ನು ಇ-ಸ್ವತ್ತಿನಡಿ ನೋಂದಾಯಿಸುವ ಪ್ರಕ್ರಿಯೆಯ ಯಾವ ಪ್ರಮಾಣದಲ್ಲಿದೆ;	ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11ಎ ಯನ್ನು ಪಡೆಯಲು ಮತ್ತು ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ-11 ಬಿ ಪಡೆಯಲು ಆಸ್ತಿಯ ಮಾಲೀಕರು ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ-9 ಮತ್ತು 11ಎ /11ಬಿ ವಿತರಿಸುತ್ತಾರೆ. ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ದಿನಾಂಕ: 23-03-2021 ರ ವರೆಗೆ ನಮೂನೆ-9, 11ಎ ಮತ್ತು 11ಬಿ ವಿತರಿಸಿರುವ ವಿವರ ಈ ಕೆಳಕಂಡಂತಿದೆ.
(ಇ)	ಸದರಿ ಜಿಲ್ಲೆಯಲ್ಲಿ ಇ-ಸ್ವತ್ತಿನಡಿ ಆಸ್ತಿಗಳನ್ನು ನೋಂದಾಯಿಸಲು ವಿಳಂಬ ಮಾಡಿದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ?	ಇಂತಹ ಪ್ರಕರಣಗಳು ಕಂಡು ಬಂದಿರುವುದಿಲ್ಲ.

ಕ್ರ.ಸಂ.	ಜಿಲ್ಲೆ	**ಇ-ಸ್ವತ್ತು ತಂತ್ರಾಂಶದ ವರದಿಯನ್ವಯ ನಮೂನೆ-9, 11ಎ ಮತ್ತು 11ಬಿ ಯನ್ನು ವಿತರಿಸಿರುವ ಒಟ್ಟು ಸಂಖ್ಯೆ**
1	ಧಾರವಾಡ	122825
2	ಗದಗ	196329
3	ಹಾವೇರಿ	190445

ಸಂ. ಗ್ರಾಅಪ 178 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.